# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

## ಸಿ.ಸಿ. ಸಂಖ್ಯೆ: 867/2025

ಫ್ರಾಸಾ – 8

ಚಾಸಾ – 12

**ಸಾಕ್ಷಿಯು ದಿಃ 19.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | : | ಡಿ.ರಮೇಶ |
| ತಂದೆಯ ಹೆಸರು | : | ದೇವಶೆಟ್ಟಿ |
| ವಯಸ್ಸು | : | 46 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಬೇಗೂರು |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ಚಾಸಾ 1 ಮತ್ತು 5 ನನಗೆ ಗೊತ್ತು. ಸಾಕ್ಷಿಯು ನಿಪಿ 2 ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 2(ಸಿ) ಎಂದು ಗುರ್ತಿಸಲಾಯಿತು. ಸದರಿ ಸಹಿಯನ್ನು ದಿಃ 29.06.2021 ರಂದು ಬನ್ನಿತಾಳಪುರ ಗ್ರಾಮದಲ್ಲಿ ಆರೋಪಿ ಜಯಕುಮಾರ್ ರವರ ಮನೆಯಲ್ಲಿ ಸಂಜೆ 4.00 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ಪೊಲೀಸರು ಪಂಚನಾಮೆಗೆ ಬಂದಾಗ ಮಾಡಿದ್ದೇನೆ. ಆ ಸಮಯದಲ್ಲಿ ಪೊಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ 1 ಮತ್ತು 5 ರವರು ಇದ್ದರು. ಆ ಸಮಯದಲ್ಲಿ ಫೋಟೋ ತೆಗೆದಿರುತ್ತಾರೆ ಮತ್ತು ಫೋಟೋದಲ್ಲಿ ತಾನು ಇದ್ದೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಫೋಟೋವನ್ನು ನಿಪಿ 5 ಎಂದು ಗುರ್ತಿಸಲಾಯಿತು. ನಿಪಿ 5 ಫೋಟೋದಲ್ಲಿ ನಾನು, ಚಾಸಾ 1, ಚಾಸಾ 5 ಮತ್ತು ಪೊಲೀಸರು ಇರುವುದಾಗಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು :– ಆರೋಪಿ ಪರ ವಕೀಲರಿಂದ**

ಪಂಚನಾಮೆ ಸ್ಥಳದ ಚೆಕ್ಕುಬಂದಿ ಹೇಳಲಾಗುವುದಿಲ್ಲ. ಪಂಚನಾಮೆಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಪಂಚನಾಮೆ ಸಮಯದಲ್ಲಿ ಚಾಸಾ 1, 5, ನಾನು ಮತ್ತು ಪೊಲೀಸರು ಇದ್ದರು. ಪಂಚನಾಮೆಯನ್ನು ಸಂಜೆ 4.00 ರಿಂದ 4.45ರ ವರೆಗೆ ಮಾಡಿರುತ್ತಾರೆ. ಪಂಚನಾಮೆಗೆ ಬರುವಂತೆ ಪೊಲೀಸರು ನನಗೆ ಲಿಖಿತ ನೋಟೀಸ್ ನೀಡಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಸ್ಥಳದಲ್ಲಿ ನನ್ನ ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ನನ್ನ ಸಂಬಂಧಿ ಅಲ್ಲ ನಮ್ಮ ಗ್ರಾಮದವರು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ